**ಓಎಸ್ ನಂಃ 65/2022 ಪಿ.ಡಬ್ಲ್ಯೂ- 2**

**ದಿನಾಂಕಃ 01.12.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದಃ**

15-20 ವರ್ಷಗಳಿಂದ ನೀವು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬರುತ್ತೀದ್ದೀರಿ ಎಂದರೆ ಹೌದು ಎನ್ನುತ್ತಾರೆ. ಅಸಲು ದಾವಾ ಸಂ. 214-2010 ನೀವು ಸಲ್ಲಿಸಿರುವ ದಾವೆಯಲ್ಲಿ ಪ್ರತಿವಾದಿ ನಿಮ್ಮ ವಿರುದ್ದ ಸಾಕ್ಷಿ ಹೇಳಿರುತ್ತಾರೆ ಎಂದರೆ ಹೌದು. ಆದ ಕಾರಣ ನೀವು ಪ್ರತಿವಾದಿ ವಿರುದ್ದ ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಇಲ್ಲ ಎನ್ನುತ್ತಾರೆ. ಸ.ನಂ. 27 ಗೋಮಾಳ ಜಮೀನು ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ. ಸದರಿ ಗೋಮಾಳ ಜಮೀನು 320 ಎಕರೆ 9 ಗುಂಟೆ ಇರುತ್ತದೆ ಎಂದರೆ ಎಷ್ಟು ಇದೆಯೋ ಗೊತ್ತಿಲ್ಲ ಎನ್ನುತ್ತಾರೆ. ಸ.ನಂ. 123 ಗೋಮಾಳ ಜಮೀನು 131 ಎಕರೆ 37 ಗುಂಟೆ ಇರುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸ.ನಂ. 27 ಮತ್ತು ಸ.ನಂ. 123 ಅಕ್ಕ ಪಕ್ಕ ಇರುತ್ತದೆಯಾ ಎಂದರೆ ಸಾಕ್ಷಿ ಸ.ನಂ. 27 ಪೋಡಿ ಆಗಿ ಹೊಸ ಸ.ನಂ. 123 ಆಗಿರುತ್ತದೆ ಎನ್ನುತ್ತಾರೆ. ಪೋಡಿ ಆಗಿರುವ ದಾಖಲಾತಿ ನೋಡಿರುತ್ತೀರಾ ಎಂರೆ ಇಲ್ಲ ಎನ್ನುತ್ತಾರೆ. ಗೋಮಾಳ ಜಮೀನು ಎಷ್ಟು ಜನಕ್ಕೆ ಮಂಜೂರು ಆಗಿರುತ್ತದೆ ಎಂದು ನೋಡೀರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಪೋಡಿ ಆಗಿ ಸ.ನಂ. 123 ಜಮೀನು ಆಗಿರುತ್ತದೆ ಎಂದು ಗೊತ್ತಾ ಎಂದರೆ ಸದರಿ ಪೋಡಿ ಆಗಿರುವುದನ್ನು ಯಾರು ತೋರಿಸಿರುತ್ತಾರೆ ಎಂದರೆ ವಾದಿ ತೋರಿಸಿರುತ್ತಾರೆ ಎನ್ನುತ್ತಾರೆ. ಯಾವಾಗ ತೂರಿಸಿರುತ್ತಾರೆ ಎಂದರೆ ದಾವೆ ಹಾಕುವ ಮೊದಲು ತೋರಿಸಿರುತ್ತಾರೆ ಎನ್ನುತ್ತಾರೆ. ಈ ದಾವೆ ಸಲ್ಲಿಸುವಾಗ ನೀವು ಹಾಗೂ ಮತ್ತೊಬ್ಬ

ಸಾಕ್ಷಿಃ ಮತ್ತು ಸಾಕ್ಷಿ ದೇವರಾಜ ರವರು ನಿಮ್ಮ ವಕೀಲರ ಬಳಿ ಬಂದಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಪೋಡಿ ಆಗಿರುವ ದಾಖಲಾತಿಯಲ್ಲಿ ಯಾವ ಜಮೀನು ಯಾರ ಹೆಸರಿಗೆ ಚಕ್ಕುಬಂದಿ ಇರುತ್ತದೆ ಎಂದು ನೋಡಿರುತ್ತೀರಾ ಎಂದರೆ ವಾದಿಗೆ ಆಗಿರುತ್ತದೆ ಎನ್ನುತ್ತಾರೆ. ದಾಸರಿ ಮುನಿವೆಂಕಟಪ್ಪ ಎಂಬುವವರ ಹೆಸರಿಗೆ ಪೋಡಿ ಆಗಿರುತ್ತದೆ ಸದರಿ ದಾಖಲಾತಿ ನೋಡಿರುತ್ತೆನೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅದರಲ್ಲಿರುವ ಚಕ್ಕುಬಂದಿಯನ್ನು ನೋಡಿರುತೇನೆ. ಪಹಣಿ ಮುಟೇಶನ್ ದಾಸರಿ ಮುನಿವೆಂಕಟರಪ್ಪ ಹೆಸರಿನಲ್ಲಿರುವುದನ್ನು ನೋಡಿರುತೇನೆ. ಎಷ್ಟನೇ ಇಸವಿಯಲ್ಲಿ ಮ್ಯುಟೇಶನ್ ಆಗಿರುವುದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ **1992-93** ಎನ್ನುತ್ತಾರೆ. ಯಾವ ವರ್ಷದಿಂದ ನೋಡಿರುತ್ತೀರಾ ಎಂದರೆ **1992-93** ಒಂದೇ ವರ್ಷ ನೋಡಿರುತ್ತೆನೆ ಎನ್ನುತ್ತಾರೆ. **1992-93** ವರ್ಷ ಆದ ನಂತರ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಗೊತ್ತಿಲ್ಲ. ದಾಸರಿ ಮುನಿವೆಂಕಟಪ್ಪನನ್ನು ನಾನು ನೋಡಿರುವುದಿಲ್ಲ. ಮಂಜೂರಾಗಿರುವ ದಾಖಲಾತಿ ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಮಂಜೂರಾದ ದಿನಾಂಕ ಮತ್ತು ನಂ. ಗೊತ್ತಾ ಎಂದರೆ ಇಲ್ಲ ಎನ್ನುತ್ತಾರೆ. ನಂ. ಅನ್ನು ಯಾರು ಹೇಳಿ ನಿಮ್ಮ ಮುಖ್ಯ ವಿಚಾರಣಾ ಪತ್ರದಲ್ಲಿ ಬರೆಸಿರುತ್ತಾರೆ ಎಂದರೆ ನಾನೇ ಬರೆಸಿರುತ್ತೇನೆ ಎನ್ನುತ್ತಾರೆ, ಯಾವ ದಾಖಲೆ ನೋಡಿ ಬರೆಸಿರುತ್ತೀರಾ ಎಂದರೆ ಮುಟೇಶನ್ ಎನ್ನುತ್ತಾರೆ. ದಾಸರಿ ಮುನಿವೆಂಕಟಪ್ಪ ಅಣ್ಣ ತಮ್ಮಂದಿರು ಎಷ್ಟು ಜನ ಎಂದರೆ ಗೊತ್ತಿಲ್ಲ. ದಾಸರಿ ಮುನಿವೇಂಕಟಪ್ಪ ತಂದೆ ಹೆಸರು ಮುನಿಯಪ್ಪ ಎನ್ನುತ್ತಾರೇ. ತಾಯಿ ಹೆಸರು ಗೊತ್ತಿಲ್ಲ. ದಾಸರಿ ಮುನಿವೆಂಕಟಪ್ಪನ ಮನೆ ನೋಡಿರುತ್ತೀರಾ ಎಂದರೆ ನೋಡಿರುತ್ತೆನೆ ಎನ್ನುತ್ತಾರೆ. ಸದರಿ ಮನೆ ಚಕ್ಕುಬಂದಿ ಗೊತ್ತಾ ಸರ್ಕಾರಿ ಇತ್ತು ಸುತ್ತ ಮುತ್ತ ಮನೆ ಇಲ್ಲ. ಎಷ್ಟು ದೂರದಲ್ಲಿ ಮನೆಗಳು

ಇರುತ್ತವೆ ಎಂದರೆ 200 ಮೀಟರ್ ದೂರದಲ್ಲಿ ಬೇರೆ ಮನೆಗಳು ಇರುತ್ತವೆ. ದಾಸರಿ ಮುನಿವೆಂಕಟಪ್ಪ ಕುಟುಂಬದವರನ್ನು ನೋಡಿರುತ್ತೀರಾ ಎಂದರೆ ನೋಡಿಲ್ಲ ಎನ್ನುತ್ತಾರೆ. ಪ್ರಸ್ತುತ ದಾವೆ ಯಾವ ಪರಿಹಾರ ಕೋರಿ ದಾವೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಗಲಾಟೆ ಆಗಿ ಎಷ್ಟು ಆಗಿರುತ್ತದೆ ಎಂರೆ 4-5 ವರ್ಷಗಳು ಆಗಿರುತ್ತವೆ. ದಾಸರಿ ಮುನಿವೆಂಕಟಪ್ಪ ಇರುವುದನ್ನು ಎಷ್ಟು ವರ್ಷಗಳಿಂದ ನೋಡಿರುತ್ತೀರಿ ಎಂದರೆ ವಾದಿ ಸ್ವಾಧಿನದಲ್ಲಿ ಇರುವುದನ್ನು ನೋಡಿರುತ್ತೆನೆ. ದಾಸರಿ ಮುನಿವೆಂಕಟಪ್ಪ ಸ್ವಾಧಿನದಲ್ಲಿ ಇರುವುದನ್ನು ನೋಡಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪತ್ರದಲ್ಲಿ ದಾಸರಿ ಮುನಿವೆಂಕಟಪ್ಪ ಸಾಯುವರೆಗೂ ಸ್ವಾಧಿನದಲ್ಲಿ ಇರುತ್ತಾರೆ ಎಂದು ಬರೆಸಿರುತ್ತೀರಾ ಎಂದರೆ ಇಲ್ಲ ಎನ್ನುತ್ತಾರೆ. ಮುಟೇಶ ವಾದಿಯ ತಂದೆ ಹೆಸರಿಗೆ ಇದೆ ಎಂದು ಬರೆಸಿರುತ್ತೀರಾ ಎಂದರೆ ಬರೆಸಿರುತ್ತೆನೆ ಎನ್ನುತ್ತಾರೆ. ದಾಸರಿ ಮುನಿವೇಂಕಟಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಒಬ್ಬನೇ ಮಗ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಒಂದು ಹೆಣ್ಣು ಮಗಳು ಇರುತ್ತಾಳೆ ಎನ್ನುತ್ತಾರೆ. ಸದರಿ ಹೆಣ್ಣು ಮಗಳ ಹೆಸರು ಮರೆತು ಹೋಗಿರುತ್ತೆನೆ. ದಾಸರಿ ಮುನಿವೇಂಕಟಪ್ಪನಿಗೇ ಎಷ್ಟು ಆಸ್ತಿ ಇರುತ್ತದೆ ಎಂದರೆ 4 ಎಕರೆ. ಬೇರೆ ಆಸ್ತಿ ಇದೆ. ವಾದಿ ಈ ಮುಂಚೆ ಹಾಕಿರುತ್ತಾರೆ ಅದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ವಾದಿ ಎಷ್ಟು ದಿನಗಳಿಂದ ಪರಿಚಯ ಎಂದರೆ 30 ವರ್ಷಗಳಿಂದ ಪರಿಚಯ ಎನ್ನುತ್ತಾರೆ. 1997 ಪ್ರತಿವಾದಿಯ ತಾಯಿ ದಾಸರಿ ಮುನಿವೆಂಕಟಪ್ಪ ವಿರುದ್ದ ದಾವೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾಸರಿ ಮುನಿವೆಂಕರಪ್ಪ ರವರು ಅಸಲು ದಾವಾ ಸಂ. 203/1997 ದಾವೆಯನ್ನು ರಾಜಿ ಮಾಡಿಕೊಂಡಿರುತ್ತಾರೆ ಸದರಿ ವಿಚಾರ ಗೊತ್ತಾ ಎಂದರೆ ಗೊತ್ತಿಲ್ಲ. ವಾದಿ

ಅಸಲುದಾವಾ ಸ.ನಂ. **209/2003** ರಲ್ಲಿ ದಾವೆ ಸಲ್ಲಿಸಿರುತ್ತಾರೆ ಅದು ಗೊತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ವಾದಿ ನಿಮಗೆ ಹೇಳಿಲ್ಲವಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರಸ್ತುತ ಸಾಕ್ಷಿ ಹೇಳಲು ಯಾರು ಹೇಳಿರುತ್ತಾರೆ ಎಂದರೆ ವಾದಿ. ದಾವಾ ಆಸ್ತಿ ದಾಸರಿ ಮನಿವೆಂಕಟಪ್ಪ ನವರದ್ದು ಅಲ್ಲ ವಾದಿಯದ್ದು ಅಲ್ಲ ಮತ್ತು ವಾದಿ ಸ್ವಾಧಿನದಲ್ಲಿ ಇರುವುದಿಲ್ಲ ಪ್ರತಿವಾದಿ ನಿಮ್ಮ ವಿರುದ್ಧ ಸಾಕ್ಷಿ ಹೇಳಿರುವ ಕಾರಣ ನೀವು ಈಗ ಅವರ ವಿರುದ್ಧ ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಸರಿಯಲ್ಲ. ವಾದಿ ನಿಮ್ಮ ಊರಿನಲ್ಲಿ ವಾಸವಿರುತ್ತಾರಾ ಎಂರೆ ಇಲ್ಲ. ವಾದಿಯೂ ದಾಸರಿ ಮುನಿವೆಂಕಟಪ್ಪ ರವರ ಮಗ ಎಂದು ಹೆಳಲು ದಾಖಲಾತಿ ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ. ದಾವಾ ಆಸ್ತಿ ಪಶ್ಚಿಮಕ್ಕೆ ಯಾರ ಆಸ್ತಿ ಎಂದರೆ ಈರಪ್ಪ. ಈರಪ್ಪ ಆಸ್ತಿಗೆ ವಿಸ್ತೀರ್ಣ **2** ಎಕರೆ ಇರಬಹುದು ಸ.ನಂ. ಗೊತ್ತಿಲ್ಲ. ಚಕ್ಕುಬಂದಿ ಪೂರ್ವಕ್ಕೆ ದಾಸರಿ ಮುನಿವೇಂಕಟಪ್ಪ, ಪಶ್ಚಿಮಕ್ಕೆ ಈರಪ್ಪನ ಸ್ವತ್ತು ಜಮೀನು. ಉತ್ತರಕ್ಕೆ ಪೊಂಗನಹಳ್ಳಿ ಗಡಿ, ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾ ಜಮೀನು ನೋಡಿಲ್ಲ. ಚಕ್ಕುಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯುದಲ್ಲಿ ಬೆರಳಚ್ಚು ಮ್ಹಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.